# ಉಸಿರುಗಟ್ಟಿದ ಬಾವಿಯೊಳಗೆ ಪಾಚಿಗಟ್ಟಿದ ನೀರು

ಕುಲೆಂಟು ಜಾತಿಗಳು ಇರುವ ಈ ಊರಲ್ಲಿ ಸುಮಾರು ನೂರೈವತ್ತು ಮನೆಗಳಿವೆ. ಮುಂದೆ ಮುಂದೆ ಮಕ್ಕಳು ಮರಿ ಬೆಳೆದಂತೆಲ್ಲ ಮನೆಗಳೂ ಹೆಚ್ಚಿ ಈಗ ಊರು ದೊಡ್ಡದಾಗಿ ಊರ ಹೊರಗಿದ್ದ ಕಾಲೊನಿ ಊರ ಮಧ್ಯ ಸೇರಿಕೊಂಡು ಹೊರ ಊರ ಜನರ ಕಣ್ಣಲ್ಲಿ ಹೊಲೆ ಮಾದಿಗರನ್ನ ಊರ ಮಧ್ಯ ಇಟ್ಟುಕೊಂಡಿರುವ ಆದರ್ಶ ಊರಾಗಿ ಎಲ್ಲರಲ್ಲೂ ಅಚ್ಚರಿ ಮೂಡಿಸಿದೆ.

ಜೀತ ಮುಕ್ತನಾಗಿ ಎ.ಕೆ. ಕಾಲೊನಿಯಲ್ಲಿ ಚಿಲ್ಲರೆ ಅಂಗಡಿ ಇಟ್ಟ ಶಿವಣ್ಣ ಅದನ್ನೇ ದಿನಸಿ ಅಂಗಡಿಯನ್ನಾಗಿ ಮಾರ್ಪಾಡು ಮಾಡಿಕೊಂಡ. ಉತ್ತಮ ಜಾತಿ ಎಂದು ಹೇಳಿಕೊಳ್ಳುವ ಜನಗಳು ಸಹ ಇದೇ ಅಂಗಡಿಯಲ್ಲಿ ಸಾಮಾನು ಕೊಳ್ಳುತ್ತಾರೆ. ಇನ್ನೂ ಬಿಂಕ ಬಿಗುಮಾನ ಇಟ್ಟುಕೊಂಡಿರುವ ಜನ ಕತ್ತಲೆಗೆ ಕಾಯುತ್ತಾರೆ.

ಈ ಅಂಗಡಿ ಊರ ಒಳಗಿನ ಕೆಲ ತುಂಡು ಹುಡುಗರಿಗೆ ಬೀಡಿ ಸಿಗರೇಟು ಸೇದಲು ಅಡ್ಡೆಯೂ ಆಗಿದೆ. ಇಲ್ಲಿ ಸೇರುವ ಹುಡುಗರು, ಬೇಕು ಬೇಡದ ಎಲ್ಲಾ ಮಾತುಗಳನ್ನು ಆಡಿಕೊಂಡು ಹೋಗುತ್ತಾರೆ. ಒಟ್ಟಾರೆ ಎಲ್ಲಾ ಜಾತಿಗಳ ಒಳ ಹರಿವು ಶ್ರಮ ಸಂಸ್ಕೃತಿಯ ಬಿಂಬವೇ ಆಗಿ ಎಲ್ಲಾ ಜಾತಿಗಳು ಕರಗಿ ಹದಗೊಂಡಿದ್ದರೂ, ಅಲ್ಲಲ್ಲಿ ಅವರದಲ್ಲದ ಮುಟ್ಟದ ಸಂಸ್ಕೃತಿಯ ವಾಸನೆ ಇದ್ದೇ ಇದೆ.

ಊರಾಗೆ ಕೊರಮರ ಪೈಕಿ ಒಂದೇ ಒಂದು ಮನೆ. ಆ ದಿಕ್ಕಿನಲ್ಲಿಯೇ ದಾಟಿ ಸ್ವಲ್ಪ ದೂರ ಹೋದರೆ ನಾಲ್ಕೈದು ಕುಂಬಾರರ ಮನೆ. ಅಲ್ಲೇ ಪಕ್ಕಕ್ಕೆ ಮಡಕೆ ಸುಡೊ ಹಾವ್ಗೆ ಮನೆ. ಅದರ ಪಕ್ಕದಲ್ಲೇ ಒಂದು ದೊಡ್ಡ ಹುಣಸೆ ಮರ. ಈ ಮರ ದಾಟಿ ನೂರು ಹೆಜ್ಜೆ ಅತ್ತ ಮುಂದೆ ಹೋದರೆ ಊರ ಮುಂದಲ ಕೆರೆ. ಆ ಕೆರೆಯಾಚೆಗೆ ಈಶ್ವರನ ದೇವಸ್ಥಾನ. ಈ ದೇವಸ್ಥಾನ ಬಳಸಿಕೊಂಡು ಹಿಂಗೆ ಎಡಮುಂದಾಗಿ ಬಂದ್ರೆ ಅಲ್ಲೇ ಹುಲ್ಕೊಪ್ಲು. ಅದರ ಮೈಗಂಟಿಕೊಂಡಂತೆ ಕೊರಮರ ಗಂಗಜ್ಜನ ಮನೆ. ಈ ಒಪ್ಪಾರು ನೆರಳಲ್ಲೆ ಹುಲಿಕಡ್ಡಿ ಸೀಳಿ ಸೊಪ್ಪಿನ ಕುಕ್ಕೆ, ಬಟ್ಟೆ ಕುಕ್ಕೆ ಹೆಣೆಯೋದು. ಊರ ನೋಡಿದ ಕೂಡಲೆ ಎಲ್ಲರ ಕಣ್ಣಿಗೆ ಎದ್ದು ಕಾಣುತ್ತವೆ ದುಡಿಯುವ ಕೈಗಳು.

ಈ ಗಂಗಜ್ಜನ ಹೆಂಡತೀನೆ ಸೂಲಗಿತ್ತಿ ಮಲೆಯಮ್ಮ. ಇವರಿಗಿಬ್ಬರು ಮಕ್ಕಳು. ಗಂಡು ಮಗ ಕೇಶವ, ಹೆಣ್ಣು ಮಗಳು ಹುಚ್ಚಮ್ಮ. ಹಿರಿಯವಳಾಗಿದ್ರಿಂದ ಪಕ್ಕದೂರಿನ ಗ್ರಾಮದೇವತೆ ಹುಚ್ಚಮ್ಮನ ಹೆಸರು ಇಟ್ಟಿದ್ದರು. ಇವಳಿಗೆ ಬೇಗ ಮದುವೇನೂ ಆಯ್ತು. ಮಕ್ಕಳು ಮರಿ ಆಗೋದಕ್ಕೂ ಮುಂಚೆನೆ ಗಂಡನ್ನ ಬಿಟ್ಟು ತೌರು ಮನೆ ಸೇರಿದ್ಲು. ಈ ಗಂಗಜ್ಜ, ಮಲೆಯಮ್ಮ ಒಂದಷ್ಟು ಕುಲ್ದವ್ರು ಸೇರಿ ಗಂಡನ ಮನೆ ತೊರೆದು ಬಂದೋಳ್ಗೆ ಸಂಬಂಧ ಎಲ್ಲ ಬಿಡಿಸಿ ಬಿಡಿಸಿ ಹೇಳಿದರು. ಕತ್ತಲಲ್ಲಿ ಬೆಳೆದ ಹೆಮ್ಮರದ ಬಗ್ಗೆ, ಆಕಾಶದಲ್ಲಿ ಕವಿದ ಕಪ್ಪು ಮೋಡಗಳ ಬಗ್ಗೆ, ಓಡಾಡುವ ಓಣಿಯ ಕಗ್ಗತ್ತಲ ದಾರಿಯ ಮುಂದಿನ ಹೆಜ್ಜೆಗಳ ಬಗ್ಗೆ ಮನದಟ್ಟು ಮಾಡಿದರು.

ತಪ್ಪೊ ಸರಿಯೊ ದೀಪವಿಲ್ಲದೆ ನಿಂತ ಹೆಣ್ಣೊಬ್ಬಳ ಆತ್ಮದೊಳಗೆ ಬೆಳಕಿನ ಮಿಂಚೊಂದು ಮಿಂಚಿ, ಪೂಜಾರಿ ಆಡಿಸುವ ಮಣೇವು ಸೋಮನಂತಾಗಿ ಕುಣಿಯುತ್ತ ಹಿತ್ತಲ ಕೊಪ್ಪಲಿಗೆ ಓಟ ಕಿತ್ತಳು. ಕುಕ್ಕೆ ಕಡ್ಡಿ ಅವಳ ಕೈ ಹಿಡಿಯಿತು. ಅಂದಿನಿಂದ ಗಂಡನ ಮುಖ ಕನಸಿನಲ್ಲೂ ಸುಳಿಯಲಿಲ್ಲ.

ಮಲೆಯಮ್ಮ ಊರಿನ ಹೆಣ್ಣುಮಕ್ಕಳ ಹೆರಿಗೆ ಕಷ್ಟ ಆದಾಗಲೆಲ್ಲ ಕೈಕಟ್ಟಿ ಕೂರುತ್ತಿರಲಿಲ್ಲ. ಪೇಟೆಯಿಂದ ಆಂಬುಲೆನ್ಸ್ ಬರೋದ್ರೊಳಗೆ ಇವಳೇ ಕೆಲವರ ಮಕ್ಕಳಿಗೆ ಜೀವ ಕೊಟ್ಟುಬಿಡುತ್ತಿದ್ದಳು.

ಈ ಮನೇಲಿ ನಾಲ್ಕು ಮಂದಿಗೂ ನಾಲ್ಕಾರು ಕೆಲಸ. ಮಗ ಕೇಶವ ಬ್ಯಾಂಡ್ ಬಾರಿಸೋನು, ಮದುವೆ ಸೀಜನ್ ಬಂದ್ರೆ ಕೈತುಂಬಾ ಕೆಲಸ. ಮಿಕ್ಕಂತೆ ಹಸ, ಕರ ಕಾಯೋದು, ಹಾಲು ಕರೆಯೋದು, ಅಪ್ಪನ ಜೊತೆಗೆ ಕೊಪ್ಪಲು ಮರದ

